ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 52ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜೂನ್ 12ರಂದು ಬುಧವಾರ ಪೂರ್ವಾಹ್ನ 11.30** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |
| | – ಪರವಾಗಿ **ಶ್ರೀಮತಿ ಸಿದ್ಧಮ್ಮ**, ಸಹಾಯಕ ನಿರ್ದೇಶಕರು | |
| ೫. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| | – ಪರವಾಗಿ **ಶ್ರೀಮತಿ ಕಾವ್ಯಶ್ರೀ ಎಂ**, ಸಹಾಯಕ ನಿರ್ದೇಶಕರು | ಸದಸ್ಯರು |
| ೭. | **ಶ್ರೀಮತಿ ಶಿಲ್ಪ.ಎಂ** ಕ.ಆ.ಸೇ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಉಪ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೬. | **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೭. | **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೮. | **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

## 2019ರ ಜೂನ್ 12ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 52ನೇ ಸಭೆಯ ನಡಾವಳಿ

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಾಸನ ಸಮಿತಿ 51ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 51ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 13.03.2019ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿ 51ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 02 | **'ಹಣಕಾಸು ಸಮಿತಿ' 33ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 33ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.06.2019ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ | ಹಣಕಾಸು ಸಮಿತಿ' 33ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು. |
| ವಿಷಯ 03 | **'ಪ್ರಶಿಕ್ಷಣ ಪರಿಷತ್' 27ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 27ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11.06.2019ರಂದು ಬೆಳಿಗ್ಗೆ 11.30ಕ್ಕೆ ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | 'ಪ್ರಶಿಕ್ಷಣ ಪರಿಷತ್' 27ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು. |
| ವಿಷಯ 04 | **ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮದ ಖರ್ಚು-ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮವನ್ನು ದಿನಾಂಕ: 31.01.2019ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದ ವೆಚ್ಚಕ್ಕೆ 6.00 ಲಕ್ಷ ರೂಪಾಯಿಗಳನ್ನು ಅಂದಾಜಿಸಿ ದಿನಾಂಕ: 08.01.2019ರಂದು ನಡೆದ ಪ್ರಶಾಸನ ಸಮಿತಿ 49ನೇ ಸಭೆಯಲ್ಲಿ ಅನುಮತಿಯನ್ನು ಪಡೆಯಲಾಗಿತ್ತು. ಘಟಿಕೋತ್ಸವ ಕಾರ್ಯಕ್ರಮಕ್ಕೆ ಒಟ್ಟು ಮೊತ್ತ ರೂ. 2,75,134/-(ಎರಡು ಲಕ್ಷ ಎಪ್ಪತ್ತೈದು ಸಾವಿರದ ಒಂದು ನೂರ ಮೂವತ್ತನಾಲ್ಕು ರೂಪಾಯಿ ಮಾತ್ರ)ಗಳು ಖರ್ಚಾಗಿದ್ದು, ಈ ಮೊತ್ತಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮದ ಖರ್ಚು-ವೆಚ್ಚ ಮೊತ್ತ ರೂ. 2,75,134/-ಕ್ಕೆ ಪ್ರಶಾಸನ ಸಮಿತಿಯು ಘಟನೋತ್ತರ ಅನುಮೋದನೆ ನೀಡಿತು. |
| ವಿಷಯ 05 | **ವಿದ್ಯುತ್ ಟ್ರಾನ್ಸ್‌ಫಾರ್ಮರ್, ನೀರಿನ ತೊಟ್ಟಿ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಬೆಂಗಳೂರಿನ ಘಟಕ ಕಾಲೇಜಿನ ಆವರಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ನೂತನ ವಿದ್ಯಾರ್ಥಿನಿಲಯವನ್ನು ನಿರ್ಮಿಸಲಾಗುತ್ತಿದೆ. ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ನಿರಂತರ ವಿದ್ಯುತ್ ಹಾಗೂ ನೀರಿನ ವ್ಯವಸ್ಥೆಯನ್ನು ಕಲ್ಪಿಸುವುದು ಅತ್ಯಗತ್ಯವಾಗಿದೆ. ವಿಶ್ವವಿದ್ಯಾಲಯದ ಕಛೇರಿ ಹಾಗೂ ಘಟಕ ಕಾಲೇಜಿಗೆ ಬಳಸುತ್ತಿರುವ ವಿದ್ಯುತ್ತಿನ ಪ್ರಮಾಣವು ಹೆಚ್ಚಿನದಾಗಿದ್ದು, ಆಗಾಗ್ಗೆ ಸಣ್ಣಪುಟ್ಟ ವಿದ್ಯುತ್ ಸಮಸ್ಯೆಗಳು (Overload) ಕಾಣಿಸಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತ್ಯೇಕವಾಗಿ ಒಂದು ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಹಾಗೆಯೇ, ಘಟಕ ಕಾಲೇಜಿನ ಆವರಣದಲ್ಲಿ ಈ ಹಿಂದೆ ಕೊರೆಸಿದ್ದ ಒಂದು ಹಳೆಯ ಕೊಳವೆಬಾವಿಯಿದ್ದು, ವಿಶ್ವವಿದ್ಯಾಲಯದ ಕಛೇರಿ, ಘಟಕ ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳಿಗೆ ಇದೊಂದೇ ನೀರಿನ ಮೂಲವಾಗಿದೆ. ಇದರಿಂದಾಗಿ ಬೇಸಿಗೆ ಸಮಯದಲ್ಲಿ ನೀರಿನ ಕೊರತೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ, ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ನಿಟ್ಟಿನಲ್ಲಿ ಹೊಸದಾಗಿ ನೀರಿನ ಸಂಪ್‌ಅನ್ನು ನಿರ್ಮಾಣ ಮಾಡಲಾಗುತ್ತಿದೆ.<br>ಈ ಕಾಮಗಾರಿಗಳಿಗಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಂದ ದರಪಟ್ಟಿಯನ್ನು ಪಡೆದು, ಕ್ರಮವಾಗಿ ರೂ. 19,30,000/-ಗಳನ್ನು ಹಾಗೂ ರೂ. 7.00 ಲಕ್ಷ ಒಟ್ಟು ಮೊತ್ತ ರೂ. 26,30,000/- ಗಳನ್ನು ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ಅನುದಾನದಲ್ಲಿ ಪಾವತಿಸಲಾಗಿದೆ.<br>ವಿಶ್ವವಿದ್ಯಾಲಯದ ಕಛೇರಿ ಮತ್ತು ಘಟಕ ಕಾಲೇಜಿನ ಶೌಚಾಲಯಗಳಿಗೆ ಹಿಂದೆ ನಿರ್ಮಿಸಲಾಗಿದ್ದ ಒಳಚರಂಡಿ ವ್ಯವಸ್ಥೆಯು ಹಾಳಾಗಿದ್ದ ಹಿನ್ನೆಲೆಯಲ್ಲಿ ಹಾಗೂ ಈ ಆವರಣದಲ್ಲಿ ಹೊಸದಾಗಿ ಕಟ್ಟಡಗಳನ್ನು ಮತ್ತು ವಿದ್ಯಾರ್ಥಿನಿಲಯವನ್ನು ನಿರ್ಮಿಸುತ್ತಿರುವುದರಿಂದ ಹೊಸದಾಗಿ ಒಳಚರಂಡಿ ಕಾಮಗಾರಿಯನ್ನು ನಡೆಸಲಾಗಿದೆ. ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ಮಾಡಿಸಲಾಗಿದ್ದು, ಈ ಕಾಮಗಾರಿಗಾಗಿ ರೂ. 2,75,000/- ಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದಿಂದ ಪಾವತಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗಾಗಿ ಪಾವತಿಸಿರುವ ಮೊತ್ತಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ವಿದ್ಯುತ್ ಟ್ರಾನ್ಸ್‌ಫಾರ್ಮರ್, ನೀರಿನ ತೊಟ್ಟಿ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿಗಳಿಗೆ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ಅನುದಾನದಿಂದ ಮತ್ತು ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದಿಂದ ಹಣ ಬಿಡುಗಡೆ ಮಾಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು. |
| ವಿಷಯ | **ಘಟಕ ಕಾಲೇಜುಗಳ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದ** |

| | |
|---|---|
| 06 | **ಗುರುತಿನ ಚೀಟಿಗಳನ್ನು ನೀಡುವ ಬಗೆಗೆ.**<br>ಬೆಂಗಳೂರಿನ ಘಟಕ ಕಾಲೇಜಿನ ಆವರಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ನೂತನ ವಿದ್ಯಾರ್ಥಿನಿಲಯವನ್ನು ನಿರ್ಮಿಸಲಾಗುತ್ತಿದೆ. ಆಯಾ ಘಟಕ ಕಾಲೇಜಿನ ಪ್ರಾಚಾರ್ಯರು ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶವನ್ನು ನೀಡಲಿದ್ದಾರೆ. ಇಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿಶ್ವವಿದ್ಯಾಲಯದ ವತಿಯಿಂದ ಗುರುತಿನ ಚೀಟಿಗಳನ್ನು ನೀಡಬಹುದಾಗಿದ್ದು, ಪ್ರಶಾಸನ ಸಮಿತಿಯ ಅನುಮತಿ ಕೋರಿದೆ. |
| ನಿರ್ಣಯ | **ಘಟಕ ಕಾಲೇಜುಗಳ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದ ಗುರುತಿನ ಚೀಟಿಗಳನ್ನು ನೀಡುವುದು ಸೂಕ್ತ ಎಂದು ಸಭೆಯು ಅಭಿಪ್ರಾಯಪಟ್ಟಿತು.** |
| ವಿಷಯ 07 | **ಗ್ರಂಥಾಲಯಕ್ಕೆ ದೇಣಿಗೆಯನ್ನು ಸ್ವೀಕರಿಸಿರುವ ಬಗೆಗೆ.**<br>ಶ್ರೀಮತಿ ಕೆ.ಎನ್. ಸರಸ್ವತಿ, ಜೀವನಸಂಧ್ಯಾ ಟ್ರಸ್ಟ್, ದೊಡ್ಡಕಲ್ಲಸಂದ್ರ ಅಂಚೆ, ಕನಕಪುರ ಮುಖ್ಯರಸ್ತೆ, ಬೆಂಗಳೂರು–ಇವರು ತಮ್ಮ ಅಜ್ಜಿ ದಿ॥ ಶ್ರೀಮತಿ ಸುಬ್ಬಲಕ್ಷ್ಮಮ್ಮ ಮತ್ತು ತಾತ ದಿ॥ ಶ್ರೀ ಎಂ. ಸದಾಶಿವರಾವ್ ಅವರ ಸ್ಮರಣಾರ್ಥ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ರೂ. 10,000/– (ಹತ್ತು ಸಾವಿರ ರೂಪಾಯಿ ಮಾತ್ರ)ಗಳನ್ನು ನೀಡಿ, ಅವರ ಹೆಸರುಗಳನ್ನು ದಾಖಲಿಸಿ ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಿರುತ್ತಾರೆ. ಈ ಮೊತ್ತವನ್ನು ಗ್ರಂಥಾಲಯಕ್ಕೆ ಅವಶ್ಯಕವಾದ ಪುಸ್ತಕಗಳ ಖರೀದಿಗೆ ಬಳಸಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಗ್ರಂಥಾಲಯಕ್ಕೆ ದೇಣಿಗೆಯನ್ನು ಸ್ವೀಕರಿಸಿ, ಇದನ್ನು ಹದಿನೆಂಟು ಪುರಾಣಗಳನ್ನು ಕೊಳ್ಳಲು ಬಳಸಲು ಸಮಿತಿಯು ಸೂಚಿಸಿತು. ಮತ್ತು ದೇಣಿಗೆ ನೀಡಿದ ಶ್ರೀಮತಿ ಕೆ.ಎನ್. ಸರಸ್ವತಿ, ಜೀವನಸಂಧ್ಯಾ ಟ್ರಸ್ಟ್, ದೊಡ್ಡಕಲ್ಲಸಂದ್ರ ಅಂಚೆ, ಕನಕಪುರ ಮುಖ್ಯರಸ್ತೆ, ಬೆಂಗಳೂರು– ಇವರಿಗೆ ಕೃತಜ್ಞತೆ ಸೂಚಿಸಿ ಪತ್ರ ಬರೆಯಲು ಸಭೆಯು ತಿಳಿಸಿತು.** |
| ವಿಷಯ 08 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅರ್ಹ ಉಪನ್ಯಾಸಕರಿಗೆ CAS ಸೌಲಭ್ಯವನ್ನು ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಪ್ರಕರಣ 39(8)ರನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳಿಗೆ ಸ್ಥಾನೀಕರಣ ಸೌಲಭ್ಯ ನೀಡುವ ಸಂಬಂಧ ಯುಜಿಸಿ ನಿಯಮಾನುಸಾರ ರಚಿಸಲಾಗಿದ್ದ CAS Statute ಅನ್ನು ದಿನಾಂಕ: 10.09.2018 ರಂದು ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಮಾನ್ಯ ಕುಲಾಧಿಪತಿಗಳು ದಿನಾಂಕ: 31.01.2019ರಂದು ಈ ಪರಿನಿಯಮಕ್ಕೆ ಅನುಮೋದನೆ ನೀಡಿರುತ್ತಾರೆ.(ಸರ್ಕಾರಿ ಪತ್ರ ಸಂಖ್ಯೆ: ಇಡಿ 383 ಯುಎನ್ಇ 2017; ದಿನಾಂಕ: 15.02.2019) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಧಿಸೂಚನೆ ಸಂಖ್ಯೆ: KSU/UGC Staff/CAS/2019-20; dated 06.05.2019ರಂತೆ ಅಧಿಸೂಚನೆಯನ್ನು ಹೊರಡಿಸಿ CAS ಸೌಲಭ್ಯವನ್ನು ಪಡೆಯಲು ಉಪನ್ಯಾಸಕರಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಒಟ್ಟು 13 ಅರ್ಹ ಉಪನ್ಯಾಸಕರು ಅರ್ಜಿಗಳನ್ನು ಸಲ್ಲಿಸಿದ್ದು, ಪರಿಶೀಲನಾ ಸಮಿತಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ನೈಜತೆಯನ್ನು ಸ್ಪಷ್ಟಪಡಿಸಿಕೊಳ್ಳಲಾಗಿರುತ್ತದೆ. ನಂತರ ದಿನಾಂಕ: 27.05.2019ರಂದು Screening cum Evaluation Committee ಮತ್ತು ಆಯ್ಕೆ ಸಮಿತಿಗಳು ಅರ್ಜಿಗಳನ್ನು ಯುಜಿಸಿ ನಿಯಮಾನುಸಾರ ಪರಿಶೀಲಿಸಿ, ಮತ್ತು ಅಭ್ಯರ್ಥಿಗಳನ್ನು ಸಂದರ್ಶನ ನಡೆಸಿ ಧನಾತ್ಮಕ ವರದಿಯನ್ನು ನೀಡಿರುತ್ತದೆ. ಈ ಕೆಳಕಂಡ 09 ಸಹಾಯಕ ಪ್ರಾಧ್ಯಾಪಕರಿಗೆ ಯುಜಿಸಿ ನಿಯಮಾನುಸಾರ AGP Rs. 6,000/- ರಿಂದ AGP Rs. 7,000/- ಮತ್ತು 04 ಜನ ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕರಾಗಿ ಬಡ್ತಿ ನೀಡಿ AGP Rs. 9,000/- to AGP Rs. 10,000/- ಗಳಿಗೆ ಸೌಲಭ್ಯ ನೀಡಲು ಶಿಫಾರಸ್ಸು ಮಾಡಿರುತ್ತದೆ. ಈ ಸೌಲಭ್ಯವನ್ನು ಒಟ್ಟು 13 ಜನ ಉಪನ್ಯಾಸಕರಿಗೆ ವಿಸ್ತರಿಸಲು ಪ್ರಶಾಸನ ಸಮಿತಿ ಅನುಮೋದನೆಗಾಗಿ ಮಂಡಿಸಿದೆ.<br>**ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರಾಗಿ ಬಡ್ತಿ ನೀಡಬೇಕಾದ ಸಿಬ್ಬಂದಿಗಳ ವಿವರ:**<br>1. ವೀರನಾರಾಯಣ ಎನ್.ಕೆ. ಪಾಂಡುರಂಗಿ<br>2. ವೆಂಕಟರಮಣ ಬಿ.ವಿ.<br>3. ಸಿ. ಪಾಲಯ್ಯ<br>4. ಶಿವಾನಿ ವಿ.<br>**ಸಹಾಯಕ ಪ್ರಾಧ್ಯಾಪಕರ ವಿವರ:** (AGP Rs. 6,000/- ರಿಂದ AGP Rs. 7,000/-)<br>1. ವಿನಯ್ ಪಿ. |

| | |
|---|---|
| | 2. ಶರತ್ ಚಂದ್ರ ಸ್ವಾಮಿ<br>3. ವಿನಾಯಕ ನಾಮಣ್ಣವರ<br>4. ಅನುಪಮಾ ಬಿ.<br>5. ರೇಖಾದೇವಿ ಎಸ್.ಎಚ್.<br>6. ಭಾಸ್ಕರ ಭಟ್ ಜೋಶಿ<br>7. ಮಂಜುನಾಥ ಭಟ್<br>8. ಕೃಷ್ಣ ವಿ. ಜೋಶಿ<br>9. ಋಷಿದೇವ್ ಭಾರ್ಗವ್ ಎನ್. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅರ್ಹ ಉಪನ್ಯಾಸಕರಿಗೆ **CAS** ಸೌಲಭ್ಯವನ್ನು ನೀಡಲು ಸಮಿತಿಯು ಒಪ್ಪಿಗೆ ಸೂಚಿಸಿತು. ಆದೇಶ ಹೊರಡಿಸಿದ ದಿನಾಂಕದಿಂದ ಹಣಕಾಸಿನ ಸೌಲಭ್ಯವನ್ನು ನೀಡಬಹುದಾಗಿದೆ ಎಂದು ಸಭೆಯು ತಿಳಿಸಿತು. **CAS** ಸೌಲಭ್ಯವನ್ನು ಪಡೆಯುವ ಸಹ ಪ್ರಾಧ್ಯಾಪಕರಾದ ಡಾ. ವೀರನಾರಾಯಣ ಪಾಂಡುರಂಗಿ ಮತ್ತು ಡಾ. ಬಿ.ವಿ ವೆಂಕಟರಮಣರವರ ನೇಮಕಾತಿ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿಯಿರುತ್ತದೆ. ಈ ಪ್ರಕರಣದ ತೀರ್ಪು ವ್ಯತಿರಿಕ್ತವಾಗಿ ಬಂದಲ್ಲಿ ಅವರು ಪಡೆಯಲಾದ ಹಣಕಾಸು ಸೌಲಭ್ಯವನ್ನು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿಸುವ ಷರತ್ತಿಗೆ ಒಳಪಡುವ (**Affidavit Bond**) ಪ್ರಮಾಣಪತ್ರ ಪಡೆದು ಆದೇಶ ನೀಡಬಹುದೆಂದು ಸಭೆಯು ತೀರ್ಮಾನಿಸಿತು. |
| ವಿಷಯ 09 | **ರಾಜ್ಯ ವೇತನಶ್ರೇಣಿಯ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿಯನ್ನು ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಯುಜಿಸಿ/ರಾಜ್ಯ ವೇತನಶ್ರೇಣಿಯ ಒಟ್ಟು 133 ಬೋಧಕ–ಬೋಧಕೇತರ ಹುದ್ದೆಗಳಲ್ಲಿ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ಪರಿನಿಯಮ'ದ ಅನ್ವಯ ರಾಜ್ಯ ವೇತನಶ್ರೇಣಿಯ ಕೆಲವು ಬೋಧಕೇತರ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಬೇಕಾಗಿರುವುದು ಸರಿಯಷ್ಟೆ. ದಿನಾಂಕ: 16.03.2018ರಂದು ನಡೆದ ಪ್ರಶಾಸನ ಸಮಿತಿ 45ನೇ ಸಭೆಯ ನಿರ್ಣಯದಂತೆ, ಈ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡುವ ಸಲುವಾಗಿ 'ಇಲಾಖಾ ಪದೋನ್ನತಿ ಸಮಿತಿ'ಯನ್ನು ರಚಿಸಲಾಗಿತ್ತು. ಈ ಸಮಿತಿಯ ಸಭೆಯು ದಿನಾಂಕ: 18.05.2019ರಂದು ನಡೆಯಿತು. ವೃಂದ ಮತ್ತು ನೇಮಕಾತಿ ಪರಿನಿಯಮದ ಅನ್ವಯ ಪದೋನ್ನತಿಗೆ ಮೀಸಲಿರುವ ಹುದ್ದೆಗಳು, ಈ ಹುದ್ದೆಗಳಿಗೆ ಪದೋನ್ನತಿ ನೀಡಲು ನಿಗದಿಪಡಿಸಿರುವ ಅರ್ಹತೆಗಳು ಹಾಗೂ ಪದೋನ್ನತಿ ಹೊಂದುವುದಕ್ಕೆ ನಿಯಮಾನುಸಾರ ನೌಕರರು ಹೊಂದಿರುವ ಎಲ್ಲಾ ಅರ್ಹತೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡ ನೌಕರರಿಗೆ ಅವರು ಹೊಂದಿರುವ ಹುದ್ದೆಯಿಂದ ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವೇತನಶ್ರೇಣಿಯೊಂದಿಗೆ ಪದೋನ್ನತಿ ನೀಡಲು ಶಿಫಾರಸ್ಸು/ ಅನುಮೋದನೆ ನೀಡಿದೆ. |

| ಕ್ರ ಸಂ. | ನೌಕರರ ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪದನಾಮ ಮತ್ತು ವೇತನಶ್ರೇಣಿ | ಪದೋನ್ನತಿ ನೀಡುವ ಪದನಾಮ ಮತ್ತು ವೇತನಶ್ರೇಣಿ |
|---|---|---|---|
| 01 | ಗೋವಿಂದ ಬಿ. | ಸಹಾಯಕ ನಿರ್ದೇಶಕರು 52650–97100 | ಉಪನಿರ್ದೇಶಕರು 67550–104600 |
| 02 | ಎಂ. ಶಿವಮೂರ್ತಿ | ಶಾಖಾಧಿಕಾರಿಗಳು 40900–78200 | ಸಹಾಯಕ ಕುಲಸಚಿವರು 52650–97100 |
| 03 | ಲೋಕೇಶ ವಿ.ಹೆಚ್. | ಸಹಾಯಕರು 30350–58250 | ಹಿರಿಯ ಸಹಾಯಕರು 37900–70850 |
| 04 | ಗಣೇಶ್ ಎಂ. | ಕಿರಿಯ ಸಹಾಯಕರು 21400–42000 | ಸಹಾಯಕರು 30350–58250 |
| 05 | ಶ್ರೀನಿವಾಸಮೂರ್ತಿ | ಗ್ರೂಪ್ 'ಡಿ' (ಜವಾನ) 17000–28950 | ಕಿರಿಯ ಸಹಾಯಕ 21400–42000 |

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2368/2011 – ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ: 1151/2018ಕ್ಕೆ ಸಂಬಂಧಿಸಿದಂತೆ ದಿನಾಂಕ: 10.05.2019ರಂದು ನೀಡಿದ ತೀರ್ಪಿನ ಆಧಾರದ ಮೇಲೆ 'ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಈ ಆದೇಶ ಹೊರಡಿಸಿದ ಗರಿಷ್ಠ ಮೂವತ್ತು ದಿನಗಳೊಳಗೆ

ಪೂರ್ಣಗೊಳಿಸತಕ್ಕದ್ದು' ಎಂದು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15.05.2019ರಲ್ಲಿ ತಿಳಿಸಲಾಗಿದೆ. ಸರ್ಕಾರಿ ಆದೇಶದ ಪ್ರತಿ ಹಾಗೂ 'ಇಲಾಖಾ ಪದೋನ್ನತಿ ಸಮಿತಿ' ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15.05.2019ರಲ್ಲಿ ಸೂಚಿಸಿರುವಂತೆ ಪದೋನ್ನತಿಗೆ ಅವಶ್ಯವಾದ ಎಲ್ಲ ನಿಯಮಗಳನ್ನು ಪಾಲಿಸಲಾಗಿದ್ದು, ನೌಕರರಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ಪದೋನ್ನತಿಯನ್ನು ನೀಡಿ ಆದೇಶವನ್ನು ಹೊರಡಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

ಕರ್ನಾಟಕ ಸರ್ಕಾರದ ನಿವೃತ್ತ ಉಪಕಾರ್ಯದರ್ಶಿಗಳಾದ ಶ್ರೀ ಯು.ಬಿ. ಉಳವಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ 'ಇಲಾಖಾ ಪದೋನ್ನತಿ ಸಮಿತಿ'ಯು ರಾಜ್ಯ ವೇತನಶ್ರೇಣಿಯ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿಯನ್ನು ನೀಡುವ ಬಗೆಗೆ ನೀಡಿರುವ ವರದಿ ಹಾಗೂ ಉಪನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: **28.05.2019**ರಂದು ನಡೆದ 'ಸಂದರ್ಶನ ಸಮಿತಿ'ಯ ಶಿಫಾರಸ್ಸನ್ನು ಪ್ರಶಾಸನ ಸಮಿತಿಯು ಪರಿಶೀಲಿಸಿತು. ಈ ಹುದ್ದೆಗಳು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದ ಅನ್ವಯ ಪದೋನ್ನತಿಗೆ ಮೀಸಲಿರುವ ಹುದ್ದೆಗಳಾಗಿದ್ದು, ಈ ಹುದ್ದೆಗಳಿಗೆ ಪದೋನ್ನತಿ ನೀಡಲು ನಿಗದಿಪಡಿಸಿರುವ ಸೇವಾನುಭವ/ಶೈಕ್ಷಣಿಕ/ಇತರೆ ಅರ್ಹತೆಗಳು ಹಾಗೂ ಪದೋನ್ನತಿ ಹೊಂದುವುದಕ್ಕೆ ನಿಯಮಾನುಸಾರ ನೌಕರರು ಹೊಂದಿರುವ ಎಲ್ಲ ಅರ್ಹತೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಶಿಫಾರಸು/ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಸಿಬ್ಬಂದಿಗಳಿಗೆ ಪದೋನ್ನತಿಯನ್ನು ನೀಡಲು ಪ್ರಶಾಸನ ಸಮಿತಿಯು ತನ್ನ ಒಪ್ಪಿಗೆಯನ್ನು ನೀಡಿತು ಹಾಗೂ ನಿಯಮಾನುಸಾರ ಆದೇಶಗಳನ್ನು ಹೊರಡಿಸಲು ಸೂಚಿಸಿತು. ಆರ್ಥಿಕ ಸೌಲಭ್ಯವನ್ನು ಆದೇಶ ಹೊರಡಿಸಿದ ದಿನಾಂಕದಿಂದ ನೀಡಬಹುದೆಂದು ಸಭೆ ತೀರ್ಮಾನಿಸಿತು.

| ಕ್ರಸಂ. | ನೌಕರರ ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪದನಾಮ ಮತ್ತು ವೇತನಶ್ರೇಣಿ | ಪದೋನ್ನತಿ ನೀಡುವ ಪದನಾಮ ಮತ್ತು ವೇತನಶ್ರೇಣಿ |
|---|---|---|---|
| **01** | ಡಾ. ಗೋವಿಂದ ಬಿ. | ಸಹಾಯಕ ನಿರ್ದೇಶಕರು **52650–97100** | ಉಪನಿರ್ದೇಶಕರು **67550–104600** |
| **02** | ವಿದ್ವಾನ್ ಎಂ. ಶಿವಮೂರ್ತಿ | ಶಾಖಾಧಿಕಾರಿಗಳು **40900–78200** | ಸಹಾಯಕ ಕುಲಸಚಿವರು **52650–97100** |
| **03** | ವಿದ್ವಾನ್ ಲೋಕೇಶ ವಿ.ಹೆಚ್. | ಸಹಾಯಕರು **30350–58250** | ಹಿರಿಯ ಸಹಾಯಕರು **37900–70850** |
| **04** | ಶ್ರೀ ಗಣೇಶ್ ಎಂ. | ಕಿರಿಯ ಸಹಾಯಕರು **21400–42000** | ಸಹಾಯಕರು **30350–58250** |
| **05** | ಶ್ರೀ ಶ್ರೀನಿವಾಸಮೂರ್ತಿ | ಗ್ರೂಪ್ 'ಡಿ' (ಜವಾನ) **17000–28950** | ಕಿರಿಯ ಸಹಾಯಕ **21400–42000** |

**ವಿಷಯ 10**

**ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ವಾಹನ ಚಾಲಕರಾದ ಕೆ. ನಾಗರಾಜ – ಇವರನ್ನು ಮೈಸೂರಿನ ಶೈವ ಸಂಶೋಧನಾ ಕೇಂದ್ರಕ್ಕೆ ವರ್ಗಾಯಿಸುವ ಬಗೆಗೆ.**

ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ತಿನಲ್ಲಿ ಕುಲಸಚಿವರ ವಾಹನವು ಒಂದೇ ಇದ್ದು ಅದಕ್ಕೆ ಚಾಲಕರು ಇರುತ್ತಾರೆ. ಆದ್ದರಿಂದ ಮತ್ತೊಬ್ಬ ವಾಹನ ಚಾಲಕರಾದ ಕೆ. ನಾಗರಾಜ ಇವರ ಸೇವೆಯನ್ನು ಬಳಸಿಕೊಳ್ಳಲು ವಿಶ್ವವಿದ್ಯಾಲಯವು ತೀರ್ಮಾನಿಸಿರುತ್ತದೆ. ಅದರಂತೆ ಇವರನ್ನು ಮೈಸೂರಿನ ಶೈವ ಸಂಶೋಧನ ಕೇಂದ್ರಕ್ಕೆ ವರ್ಗಾಯಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

**ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ವಾಹನ ಚಾಲಕರಾದ ಕೆ. ನಾಗರಾಜ – ಇವರನ್ನು ನಿರ್ದೇಶಕರ ಕೋರಿಕೆ ಮೇರೆಗೆ ವಾಹನಕ್ಕೆ ಇಂಧನ, ನಿರ್ವಹಣೆ, ದುರಸ್ತಿ ಮುಂತಾದ ವೆಚ್ಚವನ್ನು ಭರಿಸುವ ಜವಾಬ್ದಾರಿಯೊಂದಿಗೆ ಮೈಸೂರಿನ ಶೈವ ಸಂಶೋಧನಾ ಕೇಂದ್ರಕ್ಕೆ ವರ್ಗಾಯಿಸಲು ಪ್ರಶಾಸನ ಸಮಿತಿಯು ಅನುಮತಿ ನೀಡಿತು.**

**ವಿಷಯ 11**

**ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ "ಅಭಿವೃದ್ಧಿ ಸಮಿತಿ"ಯ ಸಭೆಯನ್ನು ನಡೆಸುವ ಬಗೆಗೆ**

ಮೇಲುಕೋಟೆ ಸಂಸ್ಕೃತ ಸಂಶೋಧನಾ ಸಂಸತ್ತಿನ ಅಭಿವೃದ್ಧಿ ಸಮಿತಿಯ ಸಭೆಯನ್ನು ಅಲ್ಲಿನ ಹಣಕಾಸು ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಸಂದರ್ಭಾನುಸಾರ ನಡೆಸಲು ಪ್ರಶಾಸನ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ**

**ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ತಿನ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಿ "ಅಭಿವೃದ್ಧಿ ಸಮಿತಿ"ಯ ಸಭೆಯನ್ನು ನಡೆಸಲು ಪ್ರಶಾಸನ ಸಮಿತಿಯು ಒಪ್ಪಿಗೆ ನೀಡಿತು.**

**ವಿಷಯ 12**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಬಗೆಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆಡಳಿತ ಮತ್ತು ಶೈಕ್ಷಣಿಕ ಎಲ್ಲಾ ಕಡೆಗಳಲ್ಲಿ ಈಗಾಗಲೇ ಇರುವ ಸಿಸಿ

| | |
|---|---|
| | ಕ್ಯಾಮರಾಗಳಲ್ಲದೆ ಅವಶ್ಯವಿರುವ ಇತರ ಸ್ಥಳಗಳಲ್ಲಿಯೂ ಸಿಸಿ ಕ್ಯಾಮರಾ ಅಳವಡಿಸಲು ಸಭೆಯ ಅನುಮೋದನೆ ಕೋರಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಅವಶ್ಯಕತೆಯನ್ನು ಸಭೆಯು ಗಮನಿಸಿತು. ತರಗತಿಗಳಿಗೆ ಮತ್ತು ವಿಶ್ವವಿದ್ಯಾಲಯದ ಆವರಣದ ಪ್ರವೇಶದ್ವಾರದಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಸಭೆಯು ಸೂಚಿಸಿತು.** |
| ವಿಷಯ 13 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರನ್ನು ಬದಲಾಯಿಸುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಸಕ್ತ ನಿರ್ದೇಶಕರಾದ ಪ್ರೊ. ವಿ. ಗಿರೀಶ್ ಚಂದ್ರರವರನ್ನು ದಿನಾಂಕ: 26.06.2013ರಂದು ನಿರ್ದೇಶಕರನ್ನಾಗಿ ಪ್ರಭಾರದಲ್ಲಿರಿಸಲಾಗಿತ್ತು. ಇವರ ಕಾರ್ಯಭಾರವು ಈಗಾಗಲೇ 6 ವರ್ಷಗಳಾಗಿರುತ್ತದೆ. ಆದರೆ ನಿಯಮಾನುಸಾರ 6 ವರ್ಷಗಳವರೆಗೆ ಪ್ರಭಾರದಲ್ಲಿರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ನಿರ್ದೇಶಕರನ್ನು ಬದಲಾಯಿಸಲು ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಸಕ್ತ ನಿರ್ದೇಶಕರಾದ ಪ್ರೊ. ವಿ. ಗಿರೀಶ್‌ಚಂದ್ರರವರನ್ನು ತಾತ್ಕಾಲಿಕವಾಗಿ ಮುಂದುವರೆಸಲು ಸಭೆಯು ಸೂಚಿಸಿತು.** |
| ವಿಷಯ 14 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನಿರ್ದೇಶಕರನ್ನು ಬದಲಾಯಿಸುವ ಬಗೆಗೆ.**<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನಿರ್ದೇಶಕರನ್ನಾಗಿ ಡಾ. ವೀರನಾರಾಯಣ ಎನ್. ಕೆ ಪಾಂಡುರಂಗಿ – ಇವರನ್ನು ಪ್ರಭಾರದಲ್ಲಿರಿಸಲಾಗಿತ್ತು. ಇವರನ್ನು ಬದಲಾಯಿಸಿ ನೂತನವಾಗಿ ನಿರ್ದೇಶಕರನ್ನು ನೇಮಿಸಲು ಪ್ರಶಾಸನ ಸಮಿತಿಯ ಅನುಮತಿ ಕೋರಿದೆ. |
| ನಿರ್ಣಯ | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನಿರ್ದೇಶಕರನ್ನಾಗಿ ಹಿರಿಯ ಡೀನ್‌ರಾದ ಪ್ರೊ. ವಿ. ಗಿರೀಶ್‌ಚಂದ್ರ ಅವರನ್ನು ನೇಮಿಸಿ ಆದೇಶಿಸಲು ಸಭೆಯು ತಿಳಿಸಿತು.** |
| ವಿಷಯ 15 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರಿಗೆ ಇಲಾಖಾ ಪರೀಕ್ಷಾ ನಿಯಮಗಳನ್ನು ಅಳವಡಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತಾತ್ಮಕ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957, ಕರ್ನಾಟಕ ನಾಗರಿಕ ಸೇವಾ (ಪ್ರೊಬೆಷನ್) ನಿಯಮಗಳು 1977 ಮತ್ತು ಕರ್ನಾಟಕ ನಾಗರಿಕ(ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು 1974 ರಂತೆ ಆಡಳಿತಾತ್ಮಕ ಎ,ಬಿ,ಸಿ ವೃಂದದ ನೌಕರರು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿರುತ್ತದೆ. ಅದರಂತೆ ಕ್ರಮವಹಿಸಿ ವಿಶ್ವವಿದ್ಯಾಲಯದ ಮಟ್ಟದಲ್ಲಿ ನಿಯಮಗಳನ್ನು ರೂಪಿಸಲು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ನಿಯಮಗಳನ್ನು ರೂಪಿಸಿ ಸಭಾ ನಡಾವಳಿಯನ್ನು ನೀಡಿರುತ್ತದೆ. ಇದರಂತೆ ಇಲಾಖಾ ಪರೀಕ್ಷಾ ನಿಯಮಗಳನ್ನು ಅಳವಡಿಸಿಕೊಳ್ಳಲು ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಟ್ಟದಲ್ಲಿ ನಿಯಮಗಳನ್ನು ರೂಪಿಸಿ, ವಿಶ್ವವಿದ್ಯಾಲಯದ ನೌಕರರಿಗೆ ಇಲಾಖಾ ಪರೀಕ್ಷಾ ನಿಯಮಗಳನ್ನು ಅಳವಡಿಸಿಕೊಳ್ಳಲು ಸಭೆಯು ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | |
| ವಿಷಯ 01 | **ಯುಜಿಸಿ 7ನೇ ಪರಿಷ್ಕೃತ ವೇತನದ ಪರಿನಿಯಮಕ್ಕೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ವೇತನ ಜಾರಿಗೊಳಿಸಲು ಪರಿನಿಯಮ ರಚಿಸಿದೆ. ಇದಕ್ಕೆ ಸರ್ಕಾರದ ಅನುಮೋದನೆ ಪಡೆಯಬೇಕಿದ್ದು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ವೇತನ ಜಾರಿಗೊಳಿಸಲು ರಚಿಸಲಾದ ಪರಿನಿಯಮಕ್ಕೆ ಸರ್ಕಾರದ ಅನುಮೋದನೆ ಪಡೆಯಲು ಪ್ರಶಾಸನ ಸಮಿತಿಯು ಒಪ್ಪಿಗೆ ನೀಡಿದೆ.** |
| ವಿಷಯ 02 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ರ ತಿದ್ದುಪಡಿಗೆ ಅನುಮೋದನೆ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ರಲ್ಲಿ ಘಟಕ ಕಾಲೇಜುಗಳ ಸಿಬ್ಬಂದಿಗಳ ವಿಲೀನೀಕರಣಕ್ಕೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿಕೊಳ್ಳಲಾಗಿರುವುದಿಲ್ಲ. ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ವಿಲೀನಕರಣಗೊಳಿಸಬೇಕಿದ್ದು, ಇದಕ್ಕೆ ಪೂರಕವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ಕ್ಕೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ತಿದ್ದುಪಡಿ ಅಧಿನಿಯಮಕ್ಕೆ ಸರ್ಕಾರದಿಂದ ಅನುಮೋದನೆಯನ್ನು |

| | | | |
|---|---|---|---|
| 2. | ಸಹಾಯಕ ಮುಖ್ಯಾಧೀಕ್ಷಕರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 600.00 | 650.00 |
| 3. | ಕಛೇರಿ ಸಹಾಯಕರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 300.00 | 350.00 |
| 4. | ಡಿ' ಗ್ರೂಪ್ ನೌಕರರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 100.00 | 120.00 |
| 5. | ಮೌಲ್ಯಮಾಪಕರ ದಿನಭತ್ಯೆಗಳು | 300.00 | 350.00 |
| 6. | ಉತ್ತರ ಪತ್ರಿಕೆಗಳ ಸಂಭಾವನೆ<br>ಅ) ಬಿ.ಎ 1 ಪತ್ರಿಕೆಗೆ<br>ಆ) ಎಂ.ಎ 1 ಪತ್ರಿಕೆಗೆ | 10.00<br>12.00 | 12.00<br>15.00 |

| | |
|---|---|
| ನಿರ್ಣಯ | **ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ಕಾಲೇಜುಗಳಲ್ಲಿ ಬಿ.ಎ. ಶಾಸ್ತ್ರೀ ಹಾಗೂ ಎಂ.ಎ. ಆಚಾರ್ಯ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಮುಖ್ಯಾಧೀಕ್ಷಕರ ಹಾಗೂ ಇತರ ವಿದ್ವಾಂಸರ ಸಂಭಾವನೆಯನ್ನು ಮೇಲ್ಕಂಡಂತೆ ಪರಿಷ್ಕರಿಸಲು ಸಭೆಯು ಒಪ್ಪಿತು. ಮುಂದುವರಿದು ಈ ಪರಿಷ್ಕರಣೆಯನ್ನು ಮುಂದಿನ 5 ವರ್ಷಗಳ ಕಾಲದವರೆಗೆ ಅನ್ವಯಿಸಲು ಸಭೆಯು ತಿಳಿಸಿತು.** |
| ವಿಷಯ 05 | **ಜೋತಿಷ್ಯ ಮೌಲ್ಯಮಾಪನ ಕೇಂದ್ರಗಳಲ್ಲಿ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.**<br>ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಜೋತಿಷ್ಯ ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ತಯಾರಿಕೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಕೊಠಡಿ ಮೇಲ್ವಿಚಾರಕರ ಸಂಭಾವನೆಯನ್ನು ಪದವಿಪೂರ್ವ ಶಿಕ್ಷಣಕ್ಕೆ ಸಮನಾಗಿ ಪರಿಷ್ಕರಿಸಲು ಮನವಿ ಸಲ್ಲಿಸಿದ್ದು ಮುಂದಿನ ಚರ್ಚೆಗಾಗಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ಜೋತಿಷ್ಯ ಮೌಲ್ಯಮಾಪನ ಕೇಂದ್ರಗಳಲ್ಲಿ ಸಂಭಾವನೆಯನ್ನು ಕಳೆದ ಸಾಲಿನಲ್ಲಿ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಮುಂದಿನ 2 ವರ್ಷಗಳ ಕಾಲ ಪರಿಷ್ಕರಿಸದಿರಲು ಪ್ರಶಾಸನ ಸಮಿತಿಯು ತೀರ್ಮಾನಿಸಿತು.** |
| ವಿಷಯ 06 | **ಸಂಸ್ಕೃತ ಸಂಶೋಧನ ಸಂಸತ್ – ಮೇಲುಕೋಟೆ ಇಲ್ಲಿ ನೇಮಕಗೊಂಡಿರುವ ಯೋಜನೇತರ ನೌಕರರುಗಳ ಸೇವೆಯನ್ನು ಸ್ಥಿರೀಕರಣಗೊಳಿಸುವ ಬಗೆಗೆ.**<br>1977–78ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನ ಸಂಸತ್ ನ್ನು ಸ್ಥಾಪನೆ ಮಾಡಿತ್ತು. ಸರ್ಕಾರದ ಆದೇಶದಂತೆ ಈ ಸಂಸ್ಥೆಯು ಕರ್ನಾಟಕ ಸಂಘ ಸಂಸ್ಥೆಗಳ ಕಾಯ್ದೆ– 1960ರ ಅಡಿಯಲ್ಲಿ ನೋಂದಾಯಿತವಾಗಿತ್ತು. ಅಲ್ಲಿಂದ ಯೋಜನೆಯ ಮೂಲಕ ನಂತರ ದಿನಾಂಕ: 01.04.2007ರಿಂದ ಯೋಜನೇತರ ಮೂಲಕ ವೇತನಾನುದಾನವನ್ನು ಬಿಡುಗಡೆ ಮಾಡುತ್ತಾ ಬಂದಿರುತ್ತದೆ. ಪ್ರಸ್ತುತ ಇರುವ ಒಟ್ಟಾರೆ, 34 ಯೋಜನೇತರ ನೌಕರರು ಸರ್ಕಾರದ ವೇತನವನ್ನು ಪಡೆಯುತ್ತಾ ಬಂದಿರುತ್ತಾರೆ. ಸರ್ಕಾರದ ಆದೇಶದಂತೆ ಈ ಸಂಸ್ಥೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಉದ್ದೇಶದಿಂದ ದಿನಾಂಕ: 06.02.2016ರಲ್ಲಿ ಸಂಘ– ಸಂಸ್ಥೆಗಳ ಕಾಯ್ದೆಯಂತೆ ಸಮಿತಿಯನ್ನು ವಿಸರ್ಜಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ವಹಿಸಿದೆ. ಅಲ್ಲಿಂದ ವಿಶ್ವವಿದ್ಯಾಲಯವು ಈ ಸಂಸ್ಥೆಯ ಆಡಳಿತ ನಿರ್ವಹಣೆ ನಿಯಂತ್ರಣವನ್ನು ನೋಡಿಕೊಳ್ಳುತ್ತ ಬರುತ್ತಿದೆ. ಈ ನಡುವೆ ಸಾರ್ವಜನಿಕರಿಂದ ಹಲವು ದೂರು ಅರ್ಜಿಗಳು ಬಂದಿದ್ದರ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಅದರ ಸತ್ಯಾಸತ್ಯತೆಯನ್ನು ತಿಳಿಯಲು ಶ್ರೀ ಯು. ಬಿ ಉಳವಿಯವರ ಅಧ್ಯಕ್ಷತೆಯಲ್ಲಿ 3 ಜನರ "ಪರಿಶೀಲನಾ ಸಮಿತಿ"ಯನ್ನು ರಚಿಸಿತ್ತು. ಸದರಿ ಸಮಿತಿಯು ವಿಶ್ವವಿದ್ಯಾಲಯಕ್ಕೆ ವರದಿಯನ್ನು ಸಲ್ಲಿಸಿತ್ತು. ವರದಿಯಲ್ಲಿ ಅನುಬಂಧ 'ಎ' ದಲ್ಲಿರುವ 10 ನೌಕರರುಗಳ ನೇಮಕಾತಿ ನಿಯಮಗಳನ್ವಯ ನೇಮಕಗೊಂಡಿರುವುದಾಗಿ, ಅನುಬಂಧ 'ಬಿ' 16 ನೌಕರುರಗಳು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಹುದ್ದೆಗೆ ನಿಗದಿಪಡಿಸಿದ ಅರ್ಹತೆಹೊಂದಿದ ಅಬ್ಯರ್ಥಿಗಳೆಂದು ಹಾಗೂ ಅನುಬಂಧ 'ಸಿ'ನಲ್ಲಿ 9 ನೌಕರರುಗಳು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅರ್ಹತೆ ಹೊಂದಿಲ್ಲದಿರುವುದನ್ನು ಗಮನಿಸಿ ವರದಿ ಮಾಡಿರುತ್ತಾರೆ. ಅದರಂತೆ ಈ ವಿಷಯವು 46ನೇ ಪ್ರಶಾಸನ ಸಮಿತಿಯ ವಿಷಯ ಸಂಖ್ಯೆ: 07ರಲ್ಲಿ ಮಂಡಿತವಾಗಿ ಈ ಕೆಳಕಂಡ ನಿರ್ಣಯವಾಗಿರುತ್ತದೆ.<br>**"ವರದಿಯನ್ನು ಗಮನಿಸಲಾಯಿತು. ಈ ಸಂಸ್ಕೃತ ಸಂಶೋಧನಾ ಸಂಸತ್‌ನ ನೌಕರರ ದೀರ್ಘ ಸೇವಾವಧಿ ಮತ್ತು ಇವರನ್ನು ಸೊಸೈಟಿ ಅಧಿನಿಯಮದ ಅನುಸಾರವೇ ಸ್ಥಿರೀಕರಣಗೊಳಿಸಿರುವುದರಿಂದ ಹಾಗೂ ಮಾನವೀಯತೆಯ ದೃಷ್ಟಿಯಿಂದ ಈ ವರದಿಯ ಅನುಬಂಧ ಸಿ ಯಲ್ಲಿನ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಹುದ್ದೆಗೆ ನಿಗದಿಪಡಿಸಿದ ಅರ್ಹತೆ ಹೊಂದಿರದ 09 ನೌಕರರನ್ನು ಆಯಾ ಹುದ್ದೆಗಳಲ್ಲಿಯೇ (ಪದೋನ್ನತಿಯನ್ನು ಹೊರತುಪಡಿಸಿ) ಸ್ಥಿರೀಕರಣಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು** |

| | |
|---|---|
| | ಮಾಡಲು ಸಭೆಯು ಸೂಚಿಸಿತು." ಅದರಂತೆ ಪ್ರಶಾಸನ ಸಮಿತಿಯ ತೀರ್ಮಾನದಂತೆ ಅನುಬಂಧ 'ಸಿ' ಯಲ್ಲಿರುವ 9 ನೌಕರರುಗಳ ಸೇವೆಯನ್ನು ಪರಿಗಣಿಸಿ ಮನವಿಯ ಹಿನ್ನೆಲೆಯಲ್ಲಿ ಸ್ಥಿರೀಕರಣಗೊಳಿಸಲು ಸರ್ಕಾರಕ್ಕೆ ದಿನಾಂಕ: 04.07.2018ರಲ್ಲಿ ಪತ್ರ ಬರೆಯಲಾಗಿತ್ತು. ಸರ್ಕಾರವು ಈ ಎಲ್ಲ ಅಂಶಗಳನ್ನು ಪರಿಶೀಲಿಸಿ, ಪತ್ರ ಸಂಖ್ಯೆ: ಇಡಿ 270 ಯುಎನ್ಇ 2018, ದಿನಾಂಕ: 11.06.2019ರಲ್ಲಿ "ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ವಿಶ್ವವಿದ್ಯಾಲಯ ಪ್ರಾರಂಭವಾಗುವ ಮುನ್ನ ಸಂಸ್ಥೆಯಲ್ಲಿರುವುದರಿಂದ ಹಾಗೂ ಸದರಿ ಸಂಸ್ಥೆಯು 1960ರಲ್ಲಿದ್ದ ಕರ್ನಾಟಕ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದು, ಅದರಂತೆ ಸದರಿ ನೌಕರರ ನೇಮಕಾತಿಯು ಆಗಿರುತ್ತದೆ. ಆದ್ದರಿಂದ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳು ಸದರಿ ಸಂಸ್ಥೆಯ ನೇಮಕಾತಿ ಪ್ರಾಧಿಕಾರವಾಗಿರುವುದರಿಂದ, ಸದರಿ ಸಿಬ್ಬಂದಿಗಳನ್ನು ಸ್ಥಿರೀಕರಣಗೊಳಿಸಲು ತಮ್ಮ ಹಂತದಲ್ಲಿಯೇ ಕ್ರಮವಹಿಸುವಂತೆ" ತಿಳಿಸಿದೆ. ಸರ್ಕಾರದ ನಿರ್ದೇಶನದಂತೆ ನೌಕರರುಗಳ ಸೇವೆಯನ್ನು ಸ್ಥಿರೀಕರಣಗೊಳಿಸಲು ಪ್ರಶಾಸನ ಸಮಿತಿಯ ಅನುಮತಿಗೆ ಮಂಡಿಸಿದೆ. |
| ನಿರ್ಣಯ | **ಮೇಲುಕೋಟೆಯಲ್ಲಿರುವ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ ನೇಮಕಗೊಂಡಿರುವ ನೌಕರರಿಗೆ ಇಲ್ಲಿಯವರೆಗೂ ರಾಜ್ಯ ಸರ್ಕಾರವೇ ವೇತನವನ್ನು ನೀಡುತ್ತಾ ಬಂದಿದೆ. ಇವರು 1960ರ ಸೊಸೈಟಿಯ ಅಧಿನಿಯಮದ ಪ್ರಕಾರ ನೇಮಕಗೊಂಡವರಾಗಿದ್ದಾರೆ. ಈ ನೌಕರರೆಲ್ಲರು ವಿಶ್ವವಿದ್ಯಾಲಯದ ಆಡಳಿತಕ್ಕೆ ಬರುವ ಮೊದಲೇ ನೇಮಕಗೊಂಡು ಸಾಕಷ್ಟು ದೀರ್ಘಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಪಿಂಚಣಿ ಮೊದಲ್ಗೊಂಡು ಎಲ್ಲಾ ಸರ್ಕಾರದ ಸೌಲಭವನ್ನು ಪಡೆದವರಾಗಿರುತ್ತಾರೆ. ಹೀಗಾಗಿ ಇವರೆಲ್ಲರನ್ನು ಸರ್ಕಾರದ ನಿರ್ದೇಶನದ ಸಂಖ್ಯೆ: ಇಡಿ 270 ಯುಎನ್ಇ 2018, ದಿನಾಂಕ: 11.06.2019ರಂತೆ ಯಥಾವತ್ತಾಗಿ ಸ್ಥಿರೀಕರಣಗೊಳಿಸಲು ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು.** |
| ವಿಷಯ 07 | **ಯುಜಿಸಿ ವೇತನಶ್ರೇಣಿಯ ಬೋಧಕ – ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಖ್ಯೆ ಇಡಿ91 ಯುಜಿಸಿ2010; ದಿನಾಂಕ: 25.01.2011ರ ಸರ್ಕಾರಿ ಆದೇಶದಂತೆ ಯುಜಿಸಿ ವೇತನ ಪಡೆಯುವ ಬೋಧಕ/ಬೋಧಕೇತರ ಹುದ್ದೆಗಳು ಸೃಜನೆಗೊಂಡಿದ್ದವು. ಸಂಖ್ಯೆಇಡಿ213 ಯುಆರ್‌ಸಿ2011; ದಿನಾಂಕ:25.05.2012ರ ಅನ್ವಯ ವೃಂದ ಮತ್ತು ನೇಮಕಾತಿ ಪರಿನಿಯಮ–2012' ಅನುಮೋದನೆಗೊಂಡಿತ್ತು. ದಿನಾಂಕ: 27.10.2018 ರಂದು ನಡೆದ ಪ್ರಶಾಸನ ಸಮಿತಿಯ 48ನೇ ಸಭೆಯಲ್ಲಿ ಯುಜಿಸಿ ವೇತನಶ್ರೇಣಿ ಪಡೆಯುವ ಬೋಧಕ (ಸಹಾಯಕ ಪ್ರಧ್ಯಾಪಕ, ಪರಿಶಿಷ್ಟ ಜಾತಿ) ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಗೆ ಅನುಮತಿಯನ್ನು ಪಡೆಯಲಾಗಿತ್ತು. Amendments to the existing Statute Governing the Appointment of Professors, Associate Professors, Assistant Professors and Librarians &conduct of Interview of Teaching, Academic Staff & Other Allied posts under section 38(II) of the Karnataka Samskrit University Act, 2009; Sec.7.2 ರಲ್ಲಿ ಸೂಚಿಸಿರುವಂತೆ ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ:440 ದಿನಾಂಕ:18.05.2019 ರಂತೆ ಯುಜಿಸಿ ವೇತನ ಶ್ರೇಣಿಯ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿಯನ್ನು ರಚಿಸಿದ್ದರು. ದಿನಾಂಕ: 27.05.2019 ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸಿನ ಅನ್ವಯ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಯನ್ನು ಅನುಮೋದಿಸಲು ಪ್ರಶಾಸನ ಸಮಿತಿಯ ಅನುಮತಿಗೆ ಮಂಡಿಸಿದೆ. |
| ನಿರ್ಣಯ | **ಯುಜಿಸಿ ವೇತನಶ್ರೇಣಿಯ ಸಹಾಯಕ ಪ್ರಾಧ್ಯಾಪಕ (ವೇದಾಂತ) ಬೋಧಕ ಹುದ್ದೆಗೆ ದಿನಾಂಕ: 27.05.2019 ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾ ಹುದ್ದೆಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆಯನ್ನು ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗೆ ಸಭೆಯು ಅನುಮೋದನೆಯನ್ನು ನೀಡಿತು.** |

| ಕ್ರಸಂ. | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|
| **01.** | **ವಿದ್ವಾನ್ ಮೂರ್ತಿ ವಿ.ಎಚ್**<br>S/o. ಹನುಮಂತಯ್ಯ<br>ರಮಾನಂದನಗರ, ಜಿ. ನಾಗತಿಹಳ್ಳಿ (ಪೋ)<br>ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571811 | **ಪರಿಶಿಷ್ಟ ಜಾತಿ** |

**ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

| | |
|---|---|
| ವಿಷಯ 08 | ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ 'ಡಿ' ದರ್ಜೆಯ ಹುದ್ದೆ ಭರ್ತಿ ಮಾಡಿಕೊಳ್ಳುವ ಬಗೆಗೆ.<br>ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ 'ಡಿ' ದರ್ಜೆಯ 10 ಹುದ್ದೆಗಳು ಮಂಜೂರಾಗಿದ್ದು 10 ಹುದ್ದೆಗಳನ್ನೂ ಸಹ ತುಂಬಲಾಗಿದೆ. ಆದರೆ ಮೀಸಲಾತಿ ವರ್ಗ 2ಬಿಗೆ ಮೀಸಲಾಗಿದ್ದ ಮೊಹಮ್ಮದ್ ಮುದಾಸೀರ್‌ರವರನ್ನು ಖಾಯಂ ಪೂರ್ವ ಸೇವಾವಧಿಯಲ್ಲಿರುವಾಗಲೇ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/ಬೋಧಕೇತರ ಸಿ.ಕಾ.04/2015-16, ದಿನಾಂಕ: 05.02.2018ರಂದು ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. ಹಾಗಾಗಿ ಖಾಲಿ ಇರುವ ಈ ಹುದ್ದೆಯನ್ನು ಅದೇ ಮೀಸಲಾತಿಯಲ್ಲಿ ಭರ್ತಿಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮತಿಗೆ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ 'ಡಿ' ದರ್ಜೆಯ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ತಕ್ಷಣವೇ ಕ್ರಮವಹಿಸುವಂತೆ ಸಭೆಯು ಸೂಚಿಸಿತು. |
| ವಿಷಯ 09 | "ಶೈವ ಸಂಶೋಧನಾ ಕೇಂದ್ರ"ಕ್ಕೆ ಮರುನಾಮಕರಣ ಮಾಡುವ ಬಗೆಗೆ.<br>ದಿನಾಂಕ:01.06.2017 ರಂದು ನಡೆದ 38ನೇ ಪ್ರಶಾಸನ ಸಮಿತಿಯು ಮೈಸೂರಿನಲ್ಲಿ ಶೈವ ಸಂಶೋಧನಾ ಕೇಂದ್ರ ಸ್ಥಾಪಿಸಲು ಒಪ್ಪಿಗೆ ನೀಡಿತು. ಅದರಂತೆ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಈ ಸಂಶೋಧನ ಕೇಂದ್ರವನ್ನು ಕೇವಲ ಸಂಶೋಧನೆಗೆ ಮಾತ್ರವಲ್ಲದೇ ಅಧ್ಯಯನಕ್ಕೂ ಅವಕಾಶ ಕಲ್ಪಿಸುವ ಯೋಜನೆ ಇರುವ ಕಾರಣ, **"ಶೈವ ಸಂಶೋಧನ ಕೇಂದ್ರ"** ಎಂಬ ಹೆಸರಿಗೆ ಬದಲಾಗಿ **"ಶೈವ ಸಂಶೋಧನೆ ಮತ್ತು ಅಧ್ಯಯನ ಕೇಂದ್ರ"** ಎಂಬುದಾಗಿ ಮರುನಾಮಕರಣ ಮಾಡಲು ಪ್ರಶಾಸನ ಸಮಿತಿ ಸಭೆಯ ಅನುಮತಿ ಕೋರಿದೆ. |
| ನಿರ್ಣಯ | "ಶೈವ ಸಂಶೋಧನಾ ಕೇಂದ್ರ"ಕ್ಕೆ ಬದಲಾಗಿ "ಶೈವ ಸಂಶೋಧನೆ ಮತ್ತು ಅಧ್ಯಯನ ಕೇಂದ್ರ" ಎಂಬುದಾಗಿ ನಾಮಕರಣ ಮಾಡುವುದು ಸೂಕ್ತ ಎಂದು ಸಭೆಯು ಅಭಿಪ್ರಾಯಪಟ್ಟಿತು. |

Shilpa
ಶ್ರೀಮತಿ ಶಿಲ್ಪ.ಎಂ. ಕ.ಆ.ಸೇ
ಕುಲಸಚಿವರು

ಪ್ರೊ. ಪದ್ಮಾಶೇಖರ್
ಕುಲಪತಿಗಳು